Received on 22/12/2020

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/119/ಸುತ್ತೋಲೆ/2018-19/ತವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:22.12.2020.

ಇವರಿಗೆ:-

ಜಂಟಿ ನಿರ್ದೇಶಕರು,
ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ,
ಬೆಂಗಳೂರು/ಮೈಸೂರು/ಧಾರವಾಡ
ಶಿವಮೊಗ್ಗ/ಮಂಗಳೂರು/ಗುಲ್ಬರ್ಗಾ.

ಮಾನ್ಯರೆ,

ವಿಷಯ: ಸರ್ಕಾರದ ಅಧಿಸೂಚನೆ / ಸುತ್ತೋಲೆಯನ್ನು ಪರಿಚಲಿಸುವ ಬಗ್ಗೆ.

** ** **

ಸರ್ಕಾರದಿಂದ ಜಾರಿಗೊಳಿಸಿರುವ/ಹೊರಡಿಸಲಾಗಿರುವ ಈ ಕೆಳಕಂಡ ಆದೇಶ/ಸುತ್ತೋಲೆ/ಅಧಿಸೂಚನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು, ಅಗತ್ಯವಿದ್ದಲ್ಲಿ ಇದನ್ನು ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ ಪರಿಚಲಿಸುವಂತೆ ಸೂಚಿಸಲಾಗಿದೆ.

| ಕ್ರ. ಸಂ | ಪತ್ರಸಂಖ್ಯೆ | ವಿಷಯ |
|---|---|---|
| 1. | ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 19 ಎಸ್ಆರ್ಆರ್ 2020 ದಿನಾಂಕ:12.10.2020 | Karnataka Civil Services(General Recruitment) (Amendment) Rules, 2020 ರ ಬಗ್ಗೆ; |
| 2. | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 136 ಆರ್‌ಟಿಐ 2014 ದಿನಾಂಕ:15.10.2020 | ಕರ್ನಾಟಕ ಮಾಹಿತಿ ಆಯೋಗ (ವೃಂದ ಮತ್ತು ನೇಮಕಾತಿಗಳು) ನಿಯಮಗಳು, 2020 ರ ಬಗ್ಗೆ; |

ತಮ್ಮ ವಿಶ್ವಾಸಿ,

ಅಡಕ: ಮೇಲಿನಂತೆ

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:-

1) ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
2) ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು-ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3) ಕಛೇರಿ ಪ್ರತಿ.

Enquiry

EO.1853582
27-10-2020

ಕರ್ನಾಟಕ ಸರ್ಕಾರ

# GOVERNMENT OF KARNATAKA

No. DPAR 19 SRR 2020

Karnataka Government Secretariat,
Vidhana Soudha,
Bangalore, Dated:12.10.2020

ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಆಯುಕ್ತರ ಅಪ್ತ ಶಾಖೆ.
ಸಂಖ್ಯೆ
ದಿನಾಂಕ 22/10/2020

## NOTIFICATION

Whereas the draft of the Karnataka Civil Services (General Recruitment) (Amendment) Rules, 2020, was published as required by clause (a) of sub-section (2) of Section 3 read with Section 8 of the Karnataka State Civil Services Act, 1978 (Karnataka Act 14 of 1990) in Notification No. DPAR 19 SRR 2020, dated: 08.09.2020 in Part IV-A(No. 391) of the Karnataka Gazette Extraordinary dated: 08.09.2020 inviting objections and suggestions from all persons likely to be affected thereby within fifteen days from the date of publication of the draft in the Official Gazette,

Whereas, the said Gazette was made available to the public on 08.09.2020,

And whereas, objections and suggestions received have been considered by the State Government,

Now, therefore, in exercise of the powers conferred by sub-section (1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely;

## RULES

**1. Title and Commencement.-** (1) These rules may be called the Karnataka Civil Services (General Recruitment) (Amendment) Rules, 2020.

(2) They shall come into force from the date of their final publication in the Official Gazette.

--2

**2. Amendment of Rule 5 .-** In the Karnataka Civil Services (General Recruitment) Rules, 1977, (hereinafter referred to as the said rules), in rule 5, for sub-rule (4), the following shall be substituted, namely:-

" (4) No Government servant or a person employed under any other State Government or Central Government or an Establishment in Public Sector shall be eligible for appointment to a post in any of the Civil Services of the State, unless he obtains or is deemed to have obtained a no-objection certificate in accordance with rule 11, soon after his selection is notified but before an order of appointment is issued to him and presents the same to the competent authority to appoint him to such a post".

**Explanation**: For the purpose of this sub-rule the term "Establishment in Public Sector" means,-

(a) a Co-operative society registered or deemed to have been registered under the Karnataka Co-operative Societies Act, 1959 (Karnataka Act 11 of 1959) having more than fifty percent Government Share;

(b) an educational institution established or maintained or aided by the State Government;

(c) a Government Company within the meaning of the Companies Act, 2013 (Central Act 18 of 2013);

(d) a local authority;

(e) a statutory body or corporation established by or under a State or Central Act owned or controlled by the State Government; and

(f) a State financed university established or deemed to have been established by or under any law".

**3. Amendment of Rule 11.-** For rule 11 of the said rules, the following shall be substituted, namely:-

--3

"**11. Procedure in respect of applications by Government servants.**- (1) A Government servant applying for selection to any service or post shall submit his application directly to the selecting Authority. As soon as his selection is notified, he shall intimate the fact of his selection to the head of the department in which he is working and seek issue of no-objection certificate to accept appointment to the post for which he is selected.

(2) The head of the department shall, ordinarily issue no-objection certificate unless he, for reasons to be recorded in writing considers that the Government servant is undergoing disciplinary action or facing Departmental Enquiry or criminal proceedings and it shall not be issued in public interest or it is not consistent with any specific agreement entered into between the Government servant and the Government. The head of the department shall take a decision and communicate it to the Government servant and the selection authority and authority competent to appoint to post referred in sub-rule (1) as early as possible but within a period of thirty days from the date of application to the head of the department seeking no-objection certificate failing which it shall be deemed that the no-objection certificate has been issued:

Provided that, the provisions relating to deemed no objection certificate shall not be applicable to a case of Government servants who have executed specific agreement.

(3) The initiative to seek no-objection certificate rests with the Government servant and he shall be liable to obtain and present the no-objection certificate to the authority competent to appoint him to the post to which he is selected, before the order of appointment is issued. In case no-objection certificate is deemed to have been issued under sub-rule (2), the head of the department shall be liable to intimate the same to the concerned authority.

(4) Applications by persons employed by any other State Government or Central Government or an establishment in public sector,

the procedure specified in sub-rule (1) to (3) shall apply mutatis mutandis in respect of applications by persons employed by any other State Government or Central Government or an establishment in public sector.

**Explanation**.- For the purpose of this sub-rule the term "Establishment in public Sector" shall have the meaning as assigned to it in the Explanation under sub-rule (4) of rule 5.

By Order and in the name of the
Governor of Karnataka

12/10/2020
(A.V. Shylaja)
Under Secretary to Government-2,
Department of Personnel & Administrative Reforms
(Service Rules)

To:

The Compiler, Karnataka Gazette, Bengaluru for publication in the Extra-ordinary Gazette and to supply 100 copies to DPAR(SR-A Section), Room No.31, Ground Floor, Vidhana Soudha, Bengaluru-1.

Copy to:

1. The Principal Accountant General (G&SSA) & (E&RSA), Karnataka, New Builiding, Audit Bhavan, Bengaluru- 560001.
2. The Principal Accountant General (A&E) Karnataka, Park House Road, Bengaluru- 560001.
3. The Chief Secretary to Government.
4. All Additional Chief Secretaries to Government.
5. The Additional Chief Secretary to Hon'ble Chief Minister.
6. The Special Secretary to Hon'ble Governor.
7. All Prinicipal Secretaries / Secretaries to Government.
8. *The Resident Commissioner, Karnataka Bhavan, New Delhi.
9. *The Secretary, Karnataka Legislative Assembly / Council.
10. *The Registrar General, High Court of Karnataka, Bengaluru-560001.
11. *The Secretary, Karnataka Public Service Commission, Bengaluru-560001.
12. *The Registrar, Karnataka Lokayukta, Bengaluru-560001.
13. *The Registrar, Karnataka State Administrative Tribunal, 6th & 7th Floor, Kandaya Bhavan, K.G. Road, Bengaluru-560009.
14. *The Registar, Karnataka Appellate Tribunal, M.S. Building, Bengaluru-560001.

15.All Heads of Departments & All Regional Commissioners.
16.All Deputy Commissioners of Districts/Chief Executive Officers of Zilla Panchayats/ All Superintendent of Police of Districts.
17.Deputy Secretary to Government (Cabinet) (Subject No:C:380/2020).
18.All Special / Additional / Joint / Deputy / Under Secretaries to Government.
19.All Sections of Karnataka Government Secretariat.
20.Section Guard File / Weekly Gazette / Spare copies.

(*with Covering Letter)

RTI
C.O. 1850971
27-10-2020

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 136 ಆರ್ ಟಿಐ 2014.

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು, ದಿನಾಂಕ: 15-10-2020.

## ಅಧಿಸೂಚನೆ

ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 22)ರ 16ನೇ ಪ್ರಕರಣದ (6)ನೇ ಉಪಪ್ರಕರಣದೊಂದಿಗೆ ಓದಲಾದ 27ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಕರ್ನಾಟಕ ಮಾಹಿತಿ ಆಯೋಗ (ವೃಂದ ಮತ್ತು ನೇಮಕಾತಿ) ನಿಯಮಗಳು 2020ರ ಕರಡನ್ನು ಅದರಿಂದ ಭಾದಿತರಾಗಬಹುದಾದ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ರಾಜ್ಯ ಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ 15 ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರಕ್ಕೆ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ), 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು-560001, ಇವರಿಗೆ ಕಳುಹಿಸಬಹುದು.

## ಕರಡು ನಿಯಮಗಳು

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಮಾಹಿತಿ ಆಯೋಗ (ವೃಂದ ಮತ್ತು ನೇಮಕಾತಿ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಈ ನಿಯಮಗಳು, ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 22)ರ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ ಹೊರತು, ಕರ್ನಾಟಕ ಮಾಹಿತಿ ಆಯೋಗದ ಎಲ್ಲಾ ಶ್ರೇಣಿಯ ಹುದ್ದೆಗಳಿಗೆ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.-** (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:-

ಪು.ತಿ.ನೋ

(ಎ) **"ಅರ್ಜಿದಾರ"** ಎಂದರೆ, ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿ ಇರುವ ಹುದ್ದೆಗೆ, ನೇಮಕಾತಿ ಪ್ರಾಧಿಕಾರವು ಹೊರಡಿಸಿದ ಜಾಹೀರಾತಿಗೆ ಪ್ರತಿಕ್ರಿಯೆಯಾಗಿ ಆ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುವ ಯಾರೇ ವ್ಯಕ್ತಿ;

(ಬಿ) **"ಆಯೋಗ"** ಎಂದರೆ, ಕರ್ನಾಟಕ ಮಾಹಿತಿ ಆಯೋಗ;

(ಸಿ) **"ಮುಖ್ಯ ಮಾಹಿತಿ ಆಯುಕ್ತರು"** ಎಂದರೆ, ಮಾಹಿತಿ ಹಕ್ಕು ಅಧಿನಿಯಮ, 2005 (2005 ಕೇಂದ್ರ ಅಧಿನಿಯಮ 22)ರ 15ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ "ರಾಜ್ಯ ಮುಖ್ಯ ಮಾಹಿತಿ ಆಯುಕ್ತರು"

(ಡಿ) **"ನೇರ ನೇಮಕಾತಿ"** ಎಂದರೆ, ಈ ನಿಯಮಗಳ ಉಪಬಂಧಗಳಿಗನುಸಾರವಾಗಿ ಮಾಡಿದ ಆದರೆ ಮುಂಬಡ್ತಿ, ಗುತ್ತಿಗೆ, ಪ್ರತಿನಿಯೋಜನೆಯ ಮೂಲಕ ನೇಮಕಾತಿ ಅಥವಾ ವರ್ಗಾವಣೆ ಮೂಲಕ ಹೊರತುಪಡಿಸಿದ ನೇಮಕಾತಿ;

(ಇ) **"ನೌಕರ"** ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವೃಂದದಲ್ಲಿ ನೇಮಕಗೊಂಡ ವ್ಯಕ್ತಿ;

(ಎಫ್) **"ಮಾಜಿ-ಸೈನಿಕ"** ಎಂಬ ಪದವು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಅದಕ್ಕೆ ಗೊತ್ತುಪಡಿಸಲಾದಂಥ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(ಜಿ) **"ಅರ್ಹತಾ ಪಟ್ಟಿ"** ಎಂದರೆ, ಆಯ್ಕೆ ಪ್ರಾಧಿಕಾರವು ಸಿದ್ಧಪಡಿಸಿದ ಪಟ್ಟಿ;

(ಹೆಚ್) **"ಮುಂಬಡ್ತಿ"** ಎಂದರೆ, ಈ ನಿಯಮಗಳಿಗನುಸಾರವಾಗಿ ಆಯೋಗದ ಸೇವೆಯಲ್ಲಿನ ನೌಕರರನ್ನು ಒಂದು ವೃಂದದಿಂದ ಅಥವಾ ಹುದ್ದೆಯಿಂದ ಮತ್ತೊಂದು ಉನ್ನತ ವೃಂದ ಅಥವಾ ಉನ್ನತ ಹುದ್ದೆಗೆ ನೇಮಕ ಮಾಡುವುದು;

(ಐ) **"ಅನುಸೂಚಿ"** ಎಂದರೆ, ಈ ನಿಯಮಗಳಿಗೆ ಲಗತ್ತಿಸಿರುವ ಅನುಸೂಚಿ;

(ಜೆ) **"ಆಯ್ಕೆ ಪ್ರಾಧಿಕಾರ"** ಎಂದರೆ, ಕರ್ನಾಟಕ ಮಾಹಿತಿ ಆಯೋಗವು ಅಧಿಸೂಚಿಸಿರಬಹುದಾದಂತಹ ಆಯ್ಕೆ ಪ್ರಾಧಿಕಾರ;

(ಕೆ) **"ಸೇವೆ"** ಎಂದರೆ, ಆಯೋಗದಲ್ಲಿ ಸಲ್ಲಿಸಿದ ಸೇವೆ.

(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಅವುಗಳಿಗೆ ನೀಡಲಾದಂಥ ಅದೇ ಅರ್ಥವನ್ನೇ ಹೊಂದಿರತಕ್ಕದ್ದು.

**3. ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ.-** ಕರ್ನಾಟಕ ಮಾಹಿತಿ ಆಯೋಗದ ಸಿಬ್ಬಂದಿಯು, ಕೆಳಗಿನ ಅನುಸೂಚಿಯ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಲಾದಂಥ ವೇತನ ಶ್ರೇಣಿಯೊಂದಿಗೆ ಅಂತಹ ಪ್ರವರ್ಗಗಳ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು. ಅವುಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯನ್ನು, ಅದರ ಅಂಕಣ (3), (4) ಮತ್ತು (5)ರ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

(ii) ಹಿಂಸಾಚಾರವನ್ನು ಒಳಗೊಂಡಂತೆ ಕಾನೂನು ಉಲ್ಲಂಘನೆ ಅಥವಾ ಪ್ರತಿಭಟನೆಯನ್ನು ಮಾಡುವ ಗುರಿಯನ್ನು ಹೊಂದಿರುವ;

(iii) ಭಾರತದ ಸಾರ್ವಭೌಮತ್ವ ಮತ್ತು ಅಖಂಡ ಹಿತಾಸಕ್ತಿಗೆ ಅಥವಾ ರಾಜ್ಯದ ಭದ್ರತೆಗೆ ಬಾಧಕವನ್ನುಂಟುಮಾಡುವ; ಅಥವಾ

(iv) ಧರ್ಮ, ಜನಾಂಗ, ಭಾಷೆ, ಜಾತಿ, ಸಮುದಾಯದ ಭಾವನೆಗಳ ಆಧಾರದ ಮೇಲೆ ವಿವಿಧ ವರ್ಗಗಳ ಜನರ ನಡುವೆ ದ್ವೇಷ ಅಥವಾ ವೈರತ್ವವನ್ನು ಪ್ರಚೋದಿಸುವ,

-ಯಾವುದೇ ಚಟುವಟಿಕೆ ಅಥವಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೆ ಅಥವಾ ಸಹವರ್ತಿಯಾಗಿ ಕೆಲಸ ಮಾಡುತ್ತಿದ್ದರೆ ಅವನು ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ.

(ಡಿ) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಅಡಿಯಲ್ಲಿ ಅವನು ಸೇವೆ ಸಲ್ಲಿಸುತ್ತಿದ್ದು ಸೇವೆಯಿಂದ ವಜಾಗೊಂಡಿದ್ದರೆ;

(ಇ) ಕೇಂದ್ರ ಲೋಕಸೇವಾ ಆಯೋಗ ಅಥವಾ ರಾಜ್ಯ ಲೋಕಸೇವಾ ಆಯೋಗವು ನಡೆಸುವ ಯಾವುದೇ ಪರೀಕ್ಷೆ ಅಥವಾ ಆಯ್ಕೆಗೆ ಹಾಜರಾಗುವುದರಿಂದ ಅವನನ್ನು ಶಾಶ್ವತವಾಗಿ ನಿಷೇಧಿಸಿದ್ದರೆ ಅಥವಾ ಅನರ್ಹಗೊಳಿಸಿದ್ದರೆ; ಅಥವಾ

(ಎಫ್) ಅವನು ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂಬುದಾಗಿ ನಿರ್ಣೀತನಾಗಿದ್ದರೆ,

-ಆಯೋಗದಲ್ಲಿನ ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ.

**8. ನೇಮಕಾತಿಗಾಗಿ ವಯೋಮಿತಿ.-** ಈ ನಿಯಮಗಳ ಮೇರೆಗೆ ನೇಮಕಾತಿಗಾಗಿ ಪ್ರತಿಯೊಬ್ಬ ಅಭ್ಯರ್ಥಿಯು, ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ 6ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂಥ ವಯೋಮಿತಿಯೊಳಗೆ ಇರತಕ್ಕದ್ದು.

**9. ಇತರ ನಿಯಮಗಳ ಅನ್ವಯ.-** (1) ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು, 1977, ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ನಡವಳಿಕೆ) ನಿಯಮಗಳು, 1966 ಮತ್ತು ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ಅಡಿಯಲ್ಲಿ ರಚಿಸಲಾದ ಅಥವಾ ರಚಿಸಲಾಗಿದೆಯೆಂದು ಭಾವಿಸಲಾದ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ವಿನಿಯಮಿಸುವ ಇನ್ನಿತರ ಎಲ್ಲಾ ನಿಯಮಗಳು, ಮಾಹಿತಿ ಹಕ್ಕು ಅಧಿನಿಯಮ, 2005 (2005ರ ಕೇಂದ್ರ ಅಧಿನಿಯಮ 22)ರ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಈ ನಿಯಮಗಳ ಮೇರೆಗೆ ಆಯೋಗದಲ್ಲಿ ನೇಮಕವಾದಂತಹ ನೌಕರರಿಗೆ ಅನ್ವಯವಾಗತಕ್ಕದ್ದು.

(2) ಯಾವುದೇ ಒಂದು ಸನ್ನಿವೇಶಕ್ಕೆ ಸಂಬಂಧಿಸಿದಂತೆ, ಈ ನಿಯಮಗಳಲ್ಲಿ ಯಾವುವೇ ನಿರ್ದಿಷ್ಟ ಉಪಬಂಧಗಳು ಇಲ್ಲದಿರುವಾಗ ಮತ್ತು ನಿಯಮಗಳು ಈ ಬಗ್ಗೆ ಏನನ್ನೂ ನಿರ್ದಿಷ್ಟಪಡಿಸದಿರುವಾಗ, ಕರ್ನಾಟಕ ನಾಗರಿಕ ಸೇವಾ ನಿಯಮಗಳ ಅಡಿಯಲ್ಲಿ ಸರ್ಕಾರಿ

**4. ಹುದ್ದೆಗಳ ವರ್ಗೀಕರಣ ಮತ್ತು ವೇತನ ಶ್ರೇಣಿಗಳು.-** ಆಯೋಗದಲ್ಲಿರುವ ಹುದ್ದೆಗಳು ಮತ್ತು ವೃಂದಗಳು ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲುಗಳು) ನಿಯಮಗಳು, 1957ರ 5ನೇ ನಿಯಮದ ಮೇರೆಗೆ ಮಾಡಲಾದ ಹುದ್ದೆಗಳ ವರ್ಗೀಕರಣಕ್ಕೆ ಸಂವಾದಿಯಾಗಿ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಅಡಿಯಲ್ಲಿ ವರ್ಗೀಕರಿಸತಕ್ಕದ್ದು.

**5. ನೇಮಕಾತಿ ಪ್ರಾಧಿಕಾರ.-** (1) ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ-ಇವರು ಆಯೋಗದಲ್ಲಿನ ಗ್ರೂಪ್ 'ಬಿ', ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವೃಂದಗಳ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರವಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು, ಆಯೋಗದಲ್ಲಿನ ಗ್ರೂಪ್-'ಎ' ವೃಂದದ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರವಾಗಿರತಕ್ಕದ್ದು.

**6. ನೇರ ನೇಮಕಾತಿಯ ಮೂಲಕ ನೇಮಕ:-** ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006 ರ ಮೇರೆಗೆ ಆಯೋಗದ ನೇಮಕಾತಿಯನ್ನು ಮಾಡತಕ್ಕದ್ದು;

**7. ನೇಮಕಾತಿಗಾಗಿ ಅನರ್ಹತೆ.-** (1) ಆಯೋಗದಲ್ಲಿನ ನೇಮಕಾತಿಗಾಗಿ ಯಾರೇ ವ್ಯಕ್ತಿಯು,-

(i) ಅವನು ಭಾರತದ ನಾಗರಿಕನಾಗಿರುವ ಹೊರತು;

(ii) ಅವನು ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿಯರನ್ನು ಹೊಂದಿದ್ದರೆ ಅಥವಾ ಈಗಾಗಲೇ ಜೀವಂತ ಪತ್ನಿಯನ್ನು ಹೊಂದಿದ್ದು ಪುನಃ ವಿವಾಹವಾಗಿದ್ದರೆ, ಯಾವುದೇ ಕಾನೂನಿನ ಮೇರೆಗೆ ಅದನ್ನು ಅನುಮತಿಸಿರುವ ಹೊರತು,

-ಅರ್ಹನಾಗಿರತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು,-

(ಎ) ಆಯೋಗದಲ್ಲಿ ಆತನ ನೇಮಕಾತಿಗಾಗಿ ಸರ್ಕಾರಿ ನೌಕರರು ಅಥವಾ ಸಂದರ್ಭಾನುಸಾರ ನೌಕರೇತರರಿಂದ ಯಾವುದೇ ವಿಧಾನಗಳ ಮೂಲಕ ಬಾಹ್ಯ ಬೆಂಬಲವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದರೆ;

(ಬಿ) ಕಾನೂನು ಬಾಹಿರ ಸಂಸ್ಥೆ ಅಥವಾ ಸಂಘವೆಂದು ಘೋಷಿಸಲ್ಪಟ್ಟ ಯಾವುದೇ ಸಂಘ ಅಥವಾ ಸಂಸ್ಥೆಯೊಂದಿಗೆ ಆತನು ಸ್ವತಃ ಪಾಲ್ಗೊಂಡಿದ್ದರೆ ಅಥವಾ ಸಹವರ್ತಿಯಾಗಿ ಕೆಲಸ ಮಾಡುತ್ತಿದ್ದರೆ,

(ಸಿ) ಅವನು,

(i) ಭಾರತದ ಸಂವಿಧಾನವನ್ನು ಬುಡಮೇಲು ಮಾಡುವ ಗುರಿಯನ್ನು ಹೊಂದಿರುವ;

ಪು.ತಿ.ನೋ

ನೌಕರರಿಗೆ ಅನ್ವಯವಾಗುವ ನಿಯಮಗಳಲ್ಲಿನ ಉಪಬಂಧಗಳು, ಆಯೋಗದಲ್ಲಿನ ಹುದ್ದೆಗಳು ಮತ್ತು ನೌಕರರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

R. Puttaramu 15/10/2020

(ಆರ್. ಪುಟ್ಟರಾಮು)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಜನಸ್ಪಂದನ)

15/10

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಅಧಿಕೃತ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಅದರ 50 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು:

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಮಾಹಿತಿ ಸೌಧ, ಬೆಂಗಳೂರು.
4. ಎಲ್ಲಾ ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಮಾಹಿತಿ ಸೌಧ, ಬೆಂಗಳೂರು.
5. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
7. ನಿಬಂಧಕರು, ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
9. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ, ವಿಧಾನಸೌಧ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ, ಮಾಹಿತಿ ಸೌಧ, ಬೆಂಗಳೂರು.
12. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. ಎಲ್ಲಾ ಜಿಲ್ಲಾಧಿಕಾರಿಗಳು.
14. ಎಲ್ಲಾ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15. ಎಲ್ಲಾ ಇಲಾಖಾ ಮುಖ್ಯಸ್ಥರು.
16. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಬೆಂಗಳೂರು.
17. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

## ಅನುಸೂಚಿ
## (ನಿಯಮ-3ನ್ನು ನೋಡಿ)

| ಕ್ರ. ಸಂ. | ಹುದ್ದೆಗಳ ಪ್ರವರ್ಗ ಮತ್ತು ವೇತನ ಶ್ರೇಣಿಗಳು | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| (1) | (2) | (3) | (4) | (5) |
| 1. | ಕಾರ್ಯದರ್ಶಿ | 1 | ಅಖಿಲ ಭಾರತ ಸೇವೆಯಿಂದ ಒಬ್ಬ ಅಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆಯ (ಗ್ರೂಪ್-ಎ) ಹಿರಿಯ ಶ್ರೇಣಿಯಿಂದ ಒಬ್ಬ ಅಧಿಕಾರಿಯನ್ನು ನಿಯುಕ್ತಿಗೊಳಿಸುವ ಮೂಲಕ. | |
| 2. | ಅಧೀನ ಕಾರ್ಯದರ್ಶಿ (ರೂ.52650-97100) | 1 | ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗೆ ಸೇರಿದ ಸರ್ಕಾರದ ಅಧೀನ ಕಾರ್ಯದರ್ಶಿಯನ್ನು ನಿಯುಕ್ತಿಗೊಳಿಸುವ ಮೂಲಕ ಅಥವಾ ಯಾವುದೇ ರಾಜ್ಯ ನಾಗರಿಕ ಸೇವೆಯಿಂದ ತತ್ಸಮಾನ ವೃಂದದ ಒಬ್ಬ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ. | |
| 3. | ಶಾಖಾಧಿಕಾರಿ (ರೂ.43100-83900) | 2 | ಕಚೇರಿ ಅಧೀಕ್ಷಕರ/ಹಿರಿಯ ಸಹಾಯಕರ ವೃಂದದಿಂದ ಮುಂಬಡ್ತಿಯ ಮೂಲಕ ಅಥವಾ ಮುಂಬಡ್ತಿಗಾಗಿ ಅರ್ಹ ವ್ಯಕ್ತಿಯು ಲಭ್ಯವಿಲ್ಲದಿದ್ದಲ್ಲಿ, ಯಾವುದೇ ರಾಜ್ಯ ನಾಗರಿಕ ಸೇವೆಯಿಂದ ತತ್ಸಮಾನ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ. | **ಮುಂಬಡ್ತಿಗಾಗಿ:**<br>ಕಚೇರಿ ಅಧೀಕ್ಷಕರು/ ಹಿರಿಯ ಸಹಾಯಕರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿರದ ಸೇವೆಯನ್ನು ಸಲ್ಲಿಸಿರಬೇಕು:<br>ಪರಂತು, ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿರದಿದ್ದರೆ, ಆಗ ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವಂಥ |

| | | | | |
|---|---|---|---|---|
| | | | | ಅಧಿಕಾರಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 4. | ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಆಪ್ತ ಕಾರ್ಯದರ್ಶಿ (ರೂ. 43100-83900) | 1 | ಕಚೇರಿ ಅಧೀಕ್ಷಕರ/ಹಿರಿಯ ಸಹಾಯಕರ ವೃಂದದಿಂದ ಮುಂಬಡ್ತಿಯ ಮೂಲಕ ಅಥವಾ ಮುಂಬಡ್ತಿಗಾಗಿ ಅರ್ಹ ವ್ಯಕ್ತಿ ಲಭ್ಯವಿರದಿದ್ದರೆ, ಆಗ ಯಾವುದೇ ರಾಜ್ಯ ಸಿವಿಲ್ ಸೇವೆಯಿಂದ ತತ್ಸಮಾನ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ.<br><br>**ಟಿಪ್ಪಣಿ:-** ಕಚೇರಿ ಅಧೀಕ್ಷಕರು ಅಥವಾ ಹಿರಿಯ ಸಹಾಯಕರನ್ನು ಮುಂಬಡ್ತಿಗಾಗಿ ಪರಿಗಣಿಸುವ ಅವಧಿಯಲ್ಲಿ ರದ್ದುಪಡಿಸಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು. | **ಮುಂಬಡ್ತಿಗಾಗಿ:**<br><br>ಅಂಕಣ (4)ರಲ್ಲಿ ನಿರ್ದಿಷ್ಟಪಡಿಸಿದ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು:<br><br>ಪರಂತು, ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿರದಿದ್ದರೆ, ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವಂಥ ಅಧಿಕಾರಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 5. | ಕಾರ್ಯದರ್ಶಿಯ ಆಪ್ತ ಕಾರ್ಯದರ್ಶಿ (ರೂ. 43100-83900) | 1 | ಕಚೇರಿ ಅಧೀಕ್ಷಕರ/ಹಿರಿಯ ಸಹಾಯಕರ ವೃಂದದಿಂದ ಮುಂಬಡ್ತಿ ಮಾಡುವ ಮೂಲಕ ಅಥವಾ ಮುಂಬಡ್ತಿಗಾಗಿ ಅರ್ಹ ವ್ಯಕ್ತಿ ಲಭ್ಯವಿರದಿದ್ದರೆ, ಆಗ ಯಾವುದೇ ರಾಜ್ಯ ಸಿವಿಲ್ ಸೇವೆಯಿಂದ ತತ್ಸಮಾನ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ.<br><br>**ಟಿಪ್ಪಣಿ:-** ಕಚೇರಿ ಅಧೀಕ್ಷಕರು ಅಥವಾ ಹಿರಿಯ ಸಹಾಯಕರನ್ನು ಮುಂಬಡ್ತಿಗಾಗಿ ಪರಿಗಣಿಸುವ ಅವಧಿಯಲ್ಲಿ ರದ್ದುಪಡಿಸಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು. | **ಮುಂಬಡ್ತಿಗಾಗಿ:**<br><br>ಕಚೇರಿ ಅಧೀಕ್ಷಕರು/ಹಿರಿಯ ಸಹಾಯಕರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು:<br><br>ಪರಂತು, ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳು ಲಭ್ಯವಿರದಿದ್ದರೆ, ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 6. | ಲೆಕ್ಕಪತ್ರಗಳ ಅಧೀಕ್ಷಕರು | 1 | ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯಿಂದ ತತ್ಸಮಾನ ವೃಂದದಲ್ಲಿನ | |

| | | | | |
|---|---|---|---|---|
| | (ರೂ. 40900-78200) | | ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ. | |
| 7. | ಕಚೇರಿ ಅಧೀಕ್ಷಕರು/ ಹಿರಿಯ ಸಹಾಯಕರು<br>(ರೂ. 37900-70850) | 2 | 2:1ರ ಅನುಪಾತದಲ್ಲಿ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ನೀಡುವ ಮೂಲಕ, ಪ್ರತಿ 3ನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. | **ಮುಂಬಡ್ತಿಗಾಗಿ:**<br>ಸಹಾಯಕರು ಅಥವಾ ಶೀಘ್ರಲಿಪಿಗಾರರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು:<br>ಪರಂತು, ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳು ಲಭ್ಯವಿರದಿದ್ದರೆ, ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವಂಥ ವ್ಯಕ್ತಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 8 | ಸಹಾಯಕ ಸಾಂಖ್ಯಿಕ ಅಧಿಕಾರಿ<br>(ರೂ. 37900-70850) | 1 | ಸಾಂಖ್ಯಿಕ ಮತ್ತು ಆರ್ಥಿಕ ಇಲಾಖೆಯಿಂದ ತತ್ಸಮಾನ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ. | |
| 9. | ತೀರ್ಪು ಬರಹಗಾರರು (ರೂ.37900-70850) | 14 | ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರ ಅನುಸಾರವಾಗಿ, ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರವಾಗಲೀ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರವಾಗಲೀ ನೇರನೇಮಕಾತಿ ಮೂಲಕ ಶೇಕಡಾ ಐವತ್ತರಷ್ಟು; ಮತ್ತು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ ಐವತ್ತರಷ್ಟು. | **ನೇರ ನೇಮಕಾತಿಗಾಗಿ.-**<br>(1) ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಹೊಂದಿರಬೇಕು.<br>(2) ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯು ನೀಡಲಾಗಿರುವ ಕಂಪ್ಯೂಟರ್‌ಗಳ ನಿರ್ವಹಣೆಯಲ್ಲಿ ವಿಶೇಷವಾಗಿ ಎಂ.ಎಸ್. |

| | | | | |
|---|---|---|---|---|
| | | | | ಆಫೀಸ್ ಇತ್ಯಾದಿಗಳಲ್ಲಿ ಪ್ರಾವೀಣ್ಯತೆಯ ಪ್ರಮಾಣ ಪತ್ರವನ್ನು ಹೊಂದಿರಬೇಕು.<br><br>(3) ಶೀಘ್ರಲಿಪಿಯಲ್ಲಿ ಮತ್ತು ಕಂಪ್ಯೂಟರ್‌ನಲ್ಲಿ ಅದನ್ನು ನಕಲು ಮಾಡುವ ಪ್ರಾವೀಣ್ಯತೆ ಪ್ರಮಾಣ ಪತ್ರವನ್ನು ಹೊಂದಿರಬೇಕು. ಉಕ್ತಲೇಖನ (ಡಿಕ್ಟೇಶನ್) ವನ್ನು ತೆಗೆದುಕೊಳ್ಳುವುದಕ್ಕಾಗಿ ಅಗತ್ಯಪಡಿಸಲಾದ ವೇಗ, ಪ್ರತಿ ನಿಮಿಷಕ್ಕೆ 120 ಪದಗಳಾಗಿದೆ. ಅದನ್ನು, ಕೆ.ಎಸ್.ಇ.ಇ.ಬಿ ಯು ನೀಡಲಾಗಿರುವ ಪ್ರತಿ ನಿಮಿಷಕ್ಕೆ 24 ಪದಗಳ ವೇಗದಲ್ಲಿ ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡತಕ್ಕದ್ದು ಅಥವಾ ತತ್ಸಮಾನ ಅರ್ಹತೆಯನ್ನು ಹೊಂದಿರಬೇಕು.<br><br>**ಮುಂಬಡ್ತಿಗಾಗಿ:**<br><br>ಶೀಘ್ರಲಿಪಿಗಾರರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು. |
| 10 | ಪ್ರಥಮ ದರ್ಜೆ ಸಹಾಯಕರು<br><br>(ರೂ. 27650-52650) | 14 | **ಕರ್ನಾಟಕ ಸಿವಿಲ್ ಸೇವೆಗಳು (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978ರ ಅನುಸಾರವಾಗಿ ನೇರ ನೇಮಕಾತಿ ಮೂಲಕ ಶೇಕಡಾ ಐವತ್ತರಷ್ಟು;** ಮತ್ತು ದ್ವಿತೀಯ ದರ್ಜೆ ಸಹಾಯಕರ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ ಐವತ್ತರಷ್ಟು. | **ನೇರ ನೇಮಕಾತಿಗಾಗಿ.-**<br><br>ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆದಿರಬೇಕು. |

| | | | | |
|---|---|---|---|---|
| | | | | **ಮುಂಬಡ್ತಿಗಾಗಿ.-**<br>ದ್ವಿತಿಯ ದರ್ಜೆ ಸಹಾಯಕರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು:<br>ಪರಂತು, ಐದು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳು ಲಭ್ಯವಿರದಿದ್ದರೆ, ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವಂಥ ವ್ಯಕ್ತಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 11. | ಲೆಕ್ಕಿಗ (ಅಕೌಂಟೆಂಟ್)<br>(ರೂ.27650-52650) | 1 | ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯಿಂದ ತತ್ಸಮಾನ ವೃಂದದಲ್ಲಿನ ಒಬ್ಬ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ. | |
| 12. | ಶೀಘ್ರಲಿಪಿಗಾರರು<br>(ರೂ.27650-52650) | 10 | ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983ರ ಅನುಸಾರವಾಗಿ ನೇರ ನೇಮಕಾತಿ ಮೂಲಕ ಶೇಕಡಾ ತೊಂಬತ್ತರಷ್ಟು ಮತ್ತು ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ಬೆರಳಚ್ಚುಗಾರರು ಮತ್ತು ದ್ವಿತೀಯ ದರ್ಜೆ ಸಹಾಯಕರ ವೃಂದದಿಂದ ಮುಂಬಡ್ತಿಯ ಮೂಲಕ ಶೇಕಡಾ ಹತ್ತರಷ್ಟು. ಹೆಚ್ಚಿನ ವೇತನ ಶ್ರೇಣಿಯನ್ನು ಪಡೆಯುವ ಹುದ್ದೆಯನ್ನು ಹೊಂದಿರುವ ವ್ಯಕ್ತಿಯನ್ನು ಕಡಿಮೆ ವೇತನ ಶ್ರೇಣಿಯನ್ನು ಪಡೆಯುವ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಿಂತ ಹಿರಿಯವನೆಂದು | **ನೇರ ನೇಮಕಾತಿಗಾಗಿ.-**<br>ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983ರ ಸಹಯೋಗದೊಂದಿಗೆ ನಿರ್ಧರಿಸುವುದು.<br>**ಮುಂಬಡ್ತಿಗಾಗಿ.-**<br>(1) ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. |

| | | | | |
|---|---|---|---|---|
| | | | ಪರಿಗಣಿಸುವ ಮೂಲಕ ಜ್ಯೇಷ್ಠತೆಯನ್ನು ನಿರ್ಧರಿಸಲಾಗುತ್ತದೆ. ಒಂದೇ ವೇತನ ಶ್ರೇಣಿಯನ್ನು ಪಡೆಯುವ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಳ ನಡುವಿನ ಅಂತರದ ಜ್ಯೇಷ್ಠತೆಯನ್ನು ಆಯಾ ವೃಂದದಲ್ಲಿ ಅವರು ಸಲ್ಲಿಸಿದ ಸೇವಾ ಅವಧಿಯ ಆಧಾರದ ಮೇಲೆ ನಿರ್ಧರಿಸಿ ಒಂದು ವೃಂದದಲ್ಲಿನ ವ್ಯಕ್ತಿಗಳ ನಡುವೆ ಅಂತರ್ ಜ್ಯೇಷ್ಠತೆಯನ್ನು ನಿರ್ವಹಿಸಿಕೊಂಡು ಬರಲಾಗುತ್ತದೆ. | (2) ಅಂಕಣ 4ರಲ್ಲಿ ನಿರ್ದಿಷ್ಟಪಡಿಸಲಾದ ವೃಂದಗಳಲ್ಲಿ ಐದು ವರ್ಷಗಳಿಗೆ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು:<br>ಪರಂತು, ಐದು ವರ್ಷಗಳಿಗೆ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿರದಿದ್ದರೆ, ಆಗ ಮೂರು ವರ್ಷಗಳಿಗೆ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 13. | ದ್ವಿತೀಯ ದರ್ಜೆ ಸಹಾಯಕರು (ರೂ.21400-42000) | 2 | ಕರ್ನಾಟಕ ಸಿವಿಲ್ ಸೇವೆಗಳ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು 1978ರ ಅನುಸಾರವಾಗಿ ನೇರ ನೇಮಕಾತಿ ಮತ್ತು ಮುಂಬಡ್ತಿಯ ಮೂಲಕ. | **ನೇರ ನೇಮಕಾತಿ, ವರ್ಗಾವಣೆ ಮತ್ತು ಮುಂಬಡ್ತಿ**<br>ಕರ್ನಾಟಕ ಸಿವಿಲ್ ಸೇವೆಗಳ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978ರ ಅನುಸಾರವಾಗಿ. |
| 14. | ಬೆರಳಚ್ಚುಗಾರರು (ರೂ.21400-42000) | 7 | ಕರ್ನಾಟಕ ಸಿವಿಲ್ ಸೇವೆಗಳ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983ರ ಅನುಸಾರವಾಗಿ ನೇರ ನೇಮಕಾತಿ ಮೂಲಕ. | **ನೇರ ನೇಮಕಾತಿಗಾಗಿ.-**<br>ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983 ರ ಅನುಸಾರವಾಗಿ. |
| 15. | ಚಾಲಕರು (ರೂ.21400-42000) | 11 | ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರ ಅನುಸಾರವಾಗಿ ನೇರ ನೇಮಕಾತಿ ಮೂಲಕ; | **ನೇರ ನೇಮಕಾತಿಗಾಗಿ.-** 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು ಮತ್ತು ಮಾನ್ಯತೆ ಪಡೆದ ಮೋಟಾರು ವಾಹನ ಚಾಲನಾ ಪರವಾನಗಿಯನ್ನು ಹೊಂದಿರಬೇಕು ಮತ್ತು ಆಯ್ಕೆ ಏಜೆನ್ಸಿಯ ಮೂಲಕ ಆಯ್ಕೆಗೊಂ[illegible] ನಂತರ ತಕ್ಷಣವೇ ಅಭ್ಯರ್ಥಿಯು ಶಾಲೆ[illegible] |

| | | | | |
|---|---|---|---|---|
| | | | | ನಡೆಸಲಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವುದಕ್ಕಾಗಿ ಪೋಲಿಸ್ ವಾಹನ ಚಾಲನಾ ಮತ್ತು ನಿರ್ವಹಣಾ ಶಾಲೆಯಿಂದ ಪಡೆದುಕೊಂಡ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು. |
| 16. | ಗ್ರೂಪ್-ಡಿ<br>(ರೂ. 17000-28950) | 12 | ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರ ಅನುಸಾರವಾಗಿ ನೇರ ನೇಮಕಾತಿ ಮೂಲಕ; | **ನೇರ ನೇಮಕಾತಿಗಾಗಿ.-** 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

R. Puttaramu 15/10/2020

(ಆರ್. ಪುಟ್ಟರಾಮು)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಜನಸ್ಪಂದನ)

15/10

**GOVERNMENT OF KARNATAKA**

No: DPAR 136 RTI 2014

Karnataka Government Secretariat,
DPAR (Janaspandana),
3rd floor, Podium Block, V.V. Tower,
Bangalore, dated 15-10-2020.

**NOTIFICATION**

In exercise of the powers conferred by sub-section (1) and (2) of section 27 read with sub-section (6) of section 16 of the Right to Information Act, 2005 (Central Act 22 of 2005) the Government of Karnataka hereby makes the Karnataka Information Commission (Cadre and Recruitment) Rules, 2020 is hereby published for the information of persons likely to be affected thereby and notice is hereby given that the said draft will be taken into consideration after fifteen days from the date of its publication in the official Gazette.

Any objection and suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Secretary to the Government, Department of Personnel and Administrative Reforms (Janaspandana), 3rd floor, Podium Block, V.V. Tower, Dr. B.R.Ambedkar Veedhi, Bengaluru-560001.

**Draft Rules**

1. **Title and Commencement.-** (1) These rules may be called the Karnataka Information Commission (Cadre and Recruitment) Rules, 2020.

(2) They shall come into force from the date of their publication in the Official Gazette.

(3) These rules shall be applicable to all categories of posts in the Karnataka Information Commission unless otherwise expressly provided under the Right to Information Act, 2005 (Central Act 22 of 2005) or the rules framed there under.

2. **Definitions.-**(1) In these rules, unless the context otherwise requires:-

P.T.O

(a) **"Applicant"** means a person who has applied for a post in response to the advertisement issued by the Selection Authority to the post in the Karnataka Information Commission.

(b) **"Commission"** means the Karnataka Information Commission;

(c) **"Chief Information Commissioner"** means the "State Chief Information Commissioner" appointed under sub-section (3) of section 15 of the Right to Information Act, 2005 (Central Act 22 of 2005);

(d) **"Direct recruitment"** means appointment in accordance with the provisions of these rules and otherwise than appointment by promotion, contract, deputation or appointment by transfer;

(e) **"Employee"** means a person appointed in any of the cadres specified in the schedule.

(f) **"Ex-serviceman"** shall have the same meaning assigned to it in the Karnataka Civil Services (General Recruitment) Rules, 1977;

(g) **"Merit List"** means the list prepared by the Selection Authority;

(h) **"Promotion"** means appointment of an employee in the service of the Commission from one cadre or one post to another higher cadre or higher post in accordance with these rules;

(i) **"Schedule"** means the Schedule appended to these rules;

(j) **"Selection Authority"** means the Selection Authority notified by the Karnataka Information Commission.

(k) **"Service"** means service rendered in the Commission.

(2) The words and expressions used but not defined in these rules shall have the same meaning assigned to them in the Karnataka Civil Services (General Recruitment) Rules, 1977.

**3. Method of recruitment and minimum Qualification.-** The establishment of the Karnataka Information Commission shall consist of such categories of posts with scale of pay as specified in column (2) of the Schedule below, their number, the method of recruitment and minimum qualification, shall be as specified in the corresponding entries in column (3), (4) and (5) thereof.

**4. Classification of Posts and Scales of Pay.-** The posts and cadres in the Commission shall be classified as Group-A, Group-B, Group-C, and Group-D, corresponding to the classification of posts made under rule 5 of the Karnataka Civil Services (Classification, Control and Appeal) Rules, 1957.

**5. Appointing Authority.-** (1) The State Chief Information Commissioner, Karnataka Information Commission shall be the appointing authority for Group B, Group C and Group D cadres of posts in the Commission.

(2) The State Government shall be the Appointing Authority for Group A cadre of posts in the Commission.

**6. Appointment by direct recruitment.-** The Direct recruitment to the Commission shall be made under the Karnataka Civil Services (Direct Recruitment by Competitive Examination and Selection) (General) Rules 2006.

**7. Disqualification for Appointment.-** (1) No person shall be eligible for appointment in the Commission,-

(i) unless he is citizen of India;

(ii) if he has more than one spouse living or who has married a person already having a spouse living, unless the same is permitted under any law.

(2) No person shall be eligible for appointment in the Commission,-

(a) who attempts to obtain extraneous support by any means for his appointment in the Commission from officials or non-officials, as the case may be.

(b) If he has participated or associated himself with anybody or association which has been declared as an unlawful body or association;

(c) If he has participated in or associated with any activity or program,-

(i) aimed at subversion of the Constitution of India;

(ii) aimed at organized breach or defiance of law involving violence;

(iii) which is prejudicial to the interest of the sovereignty and integrity of India or the security of the State; or

(iv) which promotes on grounds of religion, race, language, caste, community feelings of enmity or hatred between different sections of people.

(d) If he has been dismissed from service under the Government of India or any State Government or Local authority;

(e) If he has been permanently debarred or disqualified by the Union Public Service Commission or State Public Service Commission from appearing for any examination or selection conducted by it; or

(f) If he has been convicted for an offence involving moral turpitude.

**8. Age limit for recruitment.-** Every candidate for appointment under these rules shall be within the age as specified in rule 6 of the Karnataka Civil Services (General Recruitment) Rules, 1977.

**9. Application of other rules.-** (1) The Karnataka Civil Services (Probation) Rules, 1977, The Karnataka Civil Service Rules, the Karnataka Civil Services (Conduct) Rules, 1966 and all other rules regulating the conditions of services of Government Servants made or deemed to have been made under the Karnataka State Civil Services Act, 1978 (Karnataka Act 14 of 1990) shall, in so for as they are not inconsistent with the provisions of the Right to Information Act, 2005 (Central Act 22 of 2005) be applicable to the employees of Commission who are appointed under these rules.

(2) Where there are no specific provisions in these rules with regard to a situation and the rules are silent, the provisions in the rules applicable to Government servants under the Karnataka Civil Service Rules shall, 'mutatis mutandis' apply to the posts and employees in the Commission.

By Order and in the name of the
Governor of Karnataka

R. Puttaramu 15/10/2020
(R. Puttaramu)
Under Secretary to Government-1
Department of Personnel and
Administrative Reforms (Janaspandana)

To:

The compiler Karnataka Gazette for publication in the extraordinary Gazette and to supply 50 copies.

Copy to:

1. The Chief Secretary to Government, Vidhana Soudha, Bangalore.
2. All Additional Chief Secretaries to Government.

3. The Chief Information Commissioner, Karnataka State Information Commission, Mahithi Soudha, Bangalore.
4. The State Information Commissioners, Karnataka State Information Commission, Mahithi Soudha, Bangalore.
5. Special Secretary to Honb'le Governor of Karnataka, Raj Bhavan, Bangalore.
6. All the Principal Secretaries / Secretaries to the Government, Bangalore.
7. The Registrar General, High Court of Karnataka, Bangalore.
8. The Secretary, Karnataka Public Service Commission, Bangalore.
9. The Secretary, Karnataka Legislative Assembly, Vidhana Soudha, Bangalore.
10. The Secretary, Karnataka Legislative Council, Vidhana Soudha, Bangalore.
11. The Secretary, Karnataka State Information Commission, Mahithi Soudha, Bangalore.
12. The Registrar, Karnataka Lokayukta, Bangalore.
13. All District Commissioners.
14. All Chief Executive Officers, Zilla Panchayats.
15. All Head of the Departments.
16. The Registrar, Karnataka Administrative Tribunal, Kandaya Bhavan, Bangalore.
17. The Registrar, Karnataka Appellate Tribunal, M.S.Building, Bangalore.
18. Section Guard file / Spare Copy.

**SCHEDULE**
**(See rule-3)**

| SL. No. | Category of post and the scales of pay | Number of posts | Method of Recruitment | Minimum qualification |
|---|---|---|---|---|
| (1) | (2) | (3) | (4) | (5) |
| 1. | Secretary | 01 | By posting of an officer from all India Service or an officer from Karnataka Administrative Service (Group-A) Senior Scale. | |
| 2. | Under Secretary (Rs. 52650-97100) | 01 | By posting of a Under Secretary to Government belonging to the Karnataka Government Secretariat Service or by deputation of an officer of equivalent cadre from any of the State Civil Service. | |
| 3. | Section Officer (Rs.43100-83900) | 02 | By promotion from the cadre of Office Superintendent/Senior Assistant or if no eligible person is available for promotion then by deputation of an officer in the equivalent cadre from any of the State Civil Service. | **For Promotion:** Must have put in a service of not less than five years in the cadre of Office Superintendent /Senior Assistant: Provided that, if persons who have put in a service of not less than five years are not available, persons who have put in a service of not less than three years may be considered for promotion. |
| 4. | PS to State Chief Information Commissioner (Rs.43100-83900) | 01 | By promotion from the cadre of Office Superintendent/Senior Assistant or if no eligible person is available for promotion then by deputation of an officer in the equivalent cadre from any of the State Civil Service. | **For Promotion:** Must have put in a service of not less than five years in the cadre specified column (4). Provided that, if the officials who have put in a service of not less than five years are not available then officials who have |

| | | | | |
|---|---|---|---|---|
| | | | **Note:-** Office Superintendent or Senior Assistant shall exercise an irrevocable option at the time of consideration for promotion. | put in a service of not less than three years may be considered for promotion. |
| 5. | PS to Secretary (Rs.43100-83900) | 01 | By promotion from the cadre of Office Superintendent/Senior Assistant or if no eligible person is available for promotion then by deputation of an officer in the equivalent cadre from any State Civil Service.<br>**Note:-** The Office Superintendent or Senior Assistant shall exercise an irrevocable option at the time of consideration for promotion. | **For Promotion:**<br>Must have put in a service of not less than five years in the cadre of Office Superintendent / Senior Assistant:<br>Provided that, if persons who have put in a service of not less than five years are not available, persons who have put in a service of not less than three years may be considered for promotion. |
| 6. | Accounts Superintendent (40900-78200) | 01 | By deputation of an official in the equivalent cadre from the State Audit and Accounts Department. | - |
| 7. | Office superintendent/ Senior Assistant (Rs.37900-70850) | 02 | By promotion from the cadre of First Division Assistant and Stenographer in the ratio of 2:1, every 3rd vacancy shall be filled by promotion from the cadre of stenographers. | **For Promotion:**<br>Must have put in a service of not less than five years in the cadre of Assistant or Stenographer:<br>Provided that, if persons who have put in a service of not less than five years are not available, persons who have put in a service of not less than three years may be considered for promotion. |
| 8. | Assistant Statistical Officer (Rs.37900-70850) | 01 | By deputation of an official in the equivalent cadre from the Department of Statistics and Economics. | |

| | | | | |
|---|---|---|---|---|
| 9. | Judgment Writers (Rs.37900-70850) | 14 | Fifty percent by direct recruitment either through the Karnataka Public Service Commission or through the Karnataka Examination Authority in accordance with the Karnataka Civil Services (Direct Recruitment by Competitive Examination and Selection) (General) Rules 2006; and<br>Fifty percent by promotion from the cadre of Stenographer. | **For Direct Recruitment: -**<br>(1) Must be holder of a Bachelor's Degree of an University Established by Law.<br>(2) Must have Proficiency Certificate in handling computers especially M.S office, etc issued by Institution Recognized by the Government.<br>(3) Must have Proficiency Certificate in Kannada and English Senior Shorthand and transcribing the same on computer. The speed required for taking down the dictation is 120 w.p.m. the same shall be transcribed on the computer at a speed of 24 w.p.m. issued by K.S.E.E.B or possess equivalent qualification.<br>**For promotion.-** Must have put in a service of not less than five years in the cadre of Stenographer. |
| 10. | First Division Assistant (Rs.27650-52650) | 14 | Fifty percent by direct recruitment in accordance with the Karnataka Civil Services (Recruitment to the Ministerial Posts) Rules, 1978<br>and<br>Fifty percent by promotion from the cadre of Second Division Assistant. | **For Direct Recruitment.-** Must be holder of a Bachelor's Degree of an University Established by Law.<br>**For promotion.-** Must have put in a service of not less than five years in the cadre of Second Division Assistant: |

| | | | | |
|---|---|---|---|---|
| | | | | Provided that, if persons who have put in a service of not less than five years are not available, persons who have put in a service of not less than three years may be considered for promotion. |
| 11. | Accountant (Rs.27650-52650) | 01 | By deputation of an official in the equivalent cadre from the State Audit and Accounts Department. | |
| 12. | Stenographer (Rs.27650-52650) | 10 | Ninety percent by direct recruitment in accordance with the Karnataka Civil Service (Recruitment to the posts of Stenographers and typists) Rules, 1983; and<br>Ten percent by promotion from the cadre of typist and Junior Assistants on the basis of combined seniority. Seniority being determined by treating a person holding a post carrying higher scale of pay as senior to a person holding a post carrying lower scale of pay.<br>Seniority interse among persons holding a post carrying the same scales of pay being determined on the basis of length of service in the respective cadre and seniority interse among persons in cadre being maintained. | **For Direct Recruitment.-** In accordance with the Karnataka Civil Services (Recruitment to the posts of Stenographers and Typists) Rules, 1983,-<br>**For Promotion.-** (1) Must possess qualification prescribed for Direct Recruitment; and<br>(2) Must have put in a service of not less than five years in the cadres specified in column (4). provided that, officials who have put in a service of not less than five years are not available then officials who have put in a service of not less than three years may be considered for promotion. |
| 13. | Second Division Assistant (Rs.21400-42000) | 02 | By direct recruitment and promotion in accordance with the Karnataka Civil Services (Recruitment to the Ministerial Posts) Rules, 1978. | **Direct Recruitment, Transfer and Promotion**<br>In accordance with the Karnataka Civil Services (Recruitment to the Ministerial posts) Rules, 1978. |

| | | | | |
|---|---|---|---|---|
| 14. | Typist (Rs.21400-42000) | 07 | By direct recruitment in accordance with Karnataka Civil Service (Recruitment to the post of Stenographers and Typists) Rules, 1983. | **For direct recruitment.-** In accordance with the Karnataka Civil Service (Recruitment to the post of Stenographers and Typists) Rules, 1983. |
| 15. | Drivers (Rs.21400-42000) | 11 | By direct recruitment in accordance with the Karnataka Civil Services (Direct Recruitment by Competitive Examination and Selection) (General) Rules 2006; | **For direct recruitment.-** Must have passed 10th standard examination and must be holder of a valid driving licence of Motor vehicles and immediately after selection by the selecting agency, the candidate must produce a certificate obtained from the Police Driving and Maintenance School for having passed the test conducted by the School. |
| 16. | Group D (Rs.17000-28950) | 12 | By direct recruitment in accordance with the Karnataka Civil Services (Direct Recruitment by Competitive Examination and Selection) (General) Rules 2006; | **For direct recruitment.-** Must have passed 10th standard examination or possess an equivalent Examination |

By Order and in the name of the
Governor of Karnataka

R. Puttaramu 15/10/2020
(R. Puttaramu)
Under Secretary to Government-1
Department of Personnel and
Administrative Reforms (Janaspandana)

15/10